# ಅಮೀರ್ ಯಶಸ್ಸಿನ ಮೇಲೆ ವಿದ್ಯಾ ಕಣ್ಣು



'ಕಹಾನಿ'ಯಲ್ಲಿ ತಣ್ಣನೆಯ ಅಭಿನಯದಿಂದ ಅಪಾರ ಮೆಚ್ಚುಗೆ ಗಳಿಸಿದ್ದ ವಿದ್ಯಾ ಬಾಲನ್, ಈಗ ಅದರ ಎರಡನೇ ಆವೃತ್ತಿಯೊಂದಿಗೆ ಬರುತ್ತಿದ್ದಾಳೆ. ಈ ವೇಳೆಗೆ ಆಕೆಯಲ್ಲಿ ಮೂಡಿರುವ ಆಸೆ – ಅಮೀರ್ ಖಾನ್‌ನಂತೆಯೇ ತನ್ನ ಸಿನಿಮಾ ಬಹುದೊಡ್ಡ ವ್ಯವಹಾರ ನಡೆಸಬೇಕು ಎನ್ನುವುದು. ವಿದ್ಯಾ ಈಗಾಗಲೇ 'ಫೀಮೇಲ್ ಅಮೀರ್ ಖಾನ್' ಎಂಬ ಹೆಸರು ಪಡೆದಾಕೆ. ಅಮೀರ್ ಖಾನ್ ಸಿನಿಮಾಗಳ ಯಶಸ್ಸಿನಂತೆಯೇ ಮಹಿಳಾ ಪ್ರಧಾನ ಚಿತ್ರಗಳಲ್ಲಿ ವಿದ್ಯಾಳ ಸಿನಿಮಾ ಗಳಿಕೆ ಕಾಣುತ್ತದೆ. ಅಮೀರ್‌ಗೆ ಸಿನಿಮಾ ಮತ್ತು ಮಾರುಕಟ್ಟೆ ಕುರಿತು ಆಳವಾದ ಜ್ಞಾನವಿದೆ. ಅವರು ಮಾರುಕಟ್ಟೆ ವಿಚಾರದಲ್ಲಿ 'ಗುರು' ಇದ್ದಂತೆ. ಅವರೊಂದಿಗೆ ಇದುವರೆಗೂ ಕೆಲಸ ಮಾಡಿಲ್ಲ. ಆದರೆ ಅವರಂತೆ ಆಗಲು ಸಾಕಷ್ಟು ದೂರ ಕ್ರಮಿಸಬೇಕಿದೆ. ಅವರ ಸಿನಿಮಾಗಳಂತೆಯೇ ನನ್ನ ಸಿನಿಮಾ ಕೂಡ ಯಶಸ್ವಿ ಆಗಲಿದೆ ಎಂಬ ಭರವಸೆ ವ್ಯಕ್ತಪಡಿಸಿದ್ದಾಳೆ ವಿದ್ಯಾ.

ವಿದ್ಯಾ ತನ್ನ ಹೆಸರಿನ ಮೇಲೆಯೇ ಸಿನಿಮಾ ಗೆಲ್ಲಿಸುವ ತಾಕತ್ತು ಹೊಂದಿದ್ದರೂ, ಆಕೆ ಸೂಪರ್‌ಸ್ಟಾರ್‌ಗಳ ಜತೆ ಇದುವರೆಗೂ ನಟಿಸಿಲ್ಲ. ಅದಕ್ಕೆ ತನಗೆ ಅವಕಾಶ ಸಿಕ್ಕಿಯೂ ಇಲ್ಲ ಎಂದಿದ್ದಾಳೆ ಆಕೆ. 'ನನಗೆ ನನ್ನ ಕಾಲಿನ ಮೇಲೆ ನಿಲ್ಲಲು ಇಷ್ಟ. ಎತ್ತರಕ್ಕೆ ನಿಲ್ಲಬೇಕೆಂದು ಬೇರೆಯವರ ಹೆಗಲ ಮೇಲೆ ಕೈ ಇಡಲು ಬಯಸುವುದಿಲ್ಲ. ಹಾಗೆಂದು ಬೇರೆಯವರು ಹಾಗೆ ಮಾಡುತ್ತಿದ್ದಾರೆ ಎಂದಲ್ಲ. ನನ್ನದೇ ಗುರುತು ಬೆಳೆಸಿಕೊಳ್ಳಲು ಬಯಸುತ್ತೇನೆ. ಅದರ ಬಗ್ಗೆ ಹೆಮ್ಮೆ ಇದೆ' ಎನ್ನುವ ವಿದ್ಯಾ, ಮದುವೆಯ ಬಳಿಕವೂ ತನ್ನ ವರ್ಚಸ್ಸು ಕುಗ್ಗಿಲ್ಲ ಎಂಬುದನ್ನು ಸಾಬೀತುಪಡಿಸುವ ತವಕದಲ್ಲಿದ್ದಾಳೆ.



# 'ಶೋಲೆ'ಯ ನೆನಪು

ಭಾರತೀಯ ಚಿತ್ರರಂಗದ ಮೈಲಿಗಲ್ಲಿನಲ್ಲಿ ಒಂದು ಎಂದು ನಿಸ್ಸಂಶಯವಾಗಿ ಗುರುತಿಸಬಲ್ಲ ಸಿನಿಮಾ 'ಶೋಲೆ'. 1975ರಲ್ಲಿ ತೆರೆ ಕಂಡ ಈ ಚಿತ್ರ ಇಂದಿಗೂ ಚರ್ಚೆಗೆ ಒಳಗಾಗುತ್ತಿರುತ್ತದೆ. ಈಗ ಕಥೆಯೇ ಇಲ್ಲದೆ ಆ್ಯಕ್ಷನ್ ಒಂದರ ಬೆನ್ನತ್ತಿಯೇ ನೂರಾರು ಕೋಟಿ ರೂಪಾಯಿ ಖರ್ಚು ಮಾಡಿ ಇನ್ನೂರು ಕೋಟಿ ಸಂಪಾದಿಸುವ ಸಿನಿಮಾಗಳನ್ನು ನೋಡುತ್ತಿದ್ದೇವೆ. ಆದರೆ ಆಗ ಶೋಲೆಯಂತಹ ಆ್ಯಕ್ಷನ್–ಕಥಾ ಪ್ರಧಾನ ಚಿತ್ರ ಮಾಡುವುದು ಈಗಿನಷ್ಟು ಸುಲಭವಾಗಿರಲಿಲ್ಲ, ಆ ಕಾಲಘಟ್ಟದಲ್ಲಿ ಒಂದು ಕೋಟಿ ರೂಪಾಯಿ ಹೊಂದಿಸಲು ಹೆಣಗಾಡಿದ ನೆನಪನ್ನು ನಿರ್ದೇಶಕ ರಮೇಶ್ ಸಿಪ್ಪಿ ಹಂಚಿಕೊಂಡಿದ್ದಾರೆ.

ತಮ್ಮ ತಂದೆ ಜಿ.ಪಿ. ಸಿಪ್ಪಿ ಬೆನ್ನಿಗೆ ನಿಲ್ಲದಿದ್ದರೆ 'ಶೋಲೆ' ಕನಸು ನನಸಾಗುವುದು ಸಾಧ್ಯವಾಗುತ್ತಿರಲಿಲ್ಲ ಎನ್ನುವುದು ರಮೇಶ್ ಸಿಪ್ಪಿ ಅಭಿಪ್ರಾಯ. 'ಆ ಮಟ್ಟಿಗೆ ನಾನು ಅದೃಷ್ಟವಂತ' ಎಂದು ಅವರು ಹೇಳಿಕೊಂಡಿದ್ದಾರೆ. ಜನಪ್ರಿಯತೆಯ ಉತ್ತುಂಗದಲ್ಲಿದ್ದ ಕಾಲದಲ್ಲಿ ನಟ ದಿಲೀಪ್ ಕುಮಾರ್ ತಮ್ಮ ಸಂಭಾವನೆಯನ್ನು ಒಂದು ಲಕ್ಷ ರೂಪಾಯಿಗೆ ಏರಿಸಿಕೊಂಡಿದ್ದು ಬಹು ಚರ್ಚಿತ ಸಂಗತಿಯಾಗಿತ್ತು. ಸ್ಟಾರ್ ನಟರು ಹೀಗೆ ತಮ್ಮ ಸಂಭಾವನೆ ಏರಿಸಿಕೊಂಡರೆ ಚಿತ್ರರಂಗಕ್ಕೆ ಉಳಿಗಾಲವಿದೆಯೇ ಎಂದು ಮಾತನಾಡಿಕೊಂಡವರಿದ್ದರು. ಇಂತಹ ವೇಳೆಯಲ್ಲಿಯೇ ರಮೇಶ್, 'ಶೋಲೆ'ಯ ಸಾಹಸಕ್ಕೆ ಮುಂದಾಗಿದ್ದು. ಆದರೆ ಅವರ ಬಳಿ ಅದಕ್ಕೆ ಸಾಕಷ್ಟು ಹಣವಿರಲಿಲ್ಲ. ಏನು ಮಾಡುವುದು ಎಂದು ತಂದೆಯ ಬಳಿ ದುಃಖ ಹಂಚಿಕೊಂಡರು. ಜಿ.ಪಿ ಸಿಪ್ಪಿ ಆಗಷ್ಟೇ ₹40 ಲಕ್ಷ ಬಂಡವಾಳ ಹೂಡಿ 'ಸೀತಾ ಔರ್ ಗೀತಾ' ನಿರ್ಮಿಸಿ ಲಾಭವನ್ನೂ ಗಳಿಸಿದ್ದರು. 'ಶೋಲೆ'ಗೆ ಒಂದು ಕೋಟಿ ರೂಪಾಯಿ ಬೇಕು ಎಂದು ತಂದೆಯ ಬಳಿ ಕೇಳಿದಾಗ ತಕ್ಷಣಕ್ಕೆ ಮಂಜೂರು ಸಹ ಆಯಿತು. ಆದರೆ ಅಂತಿಮವಾಗಿ ಚಿತ್ರಕ್ಕೆ ತಗುಲಿದ ವೆಚ್ಚ ₹3 ಕೋಟಿ.

'ಆಗಿನ ಕಾಲಕ್ಕೆ ಅತಿ ದುಬಾರಿ ಚಿತ್ರವದು. ಚಿತ್ರಕ್ಕೆ ಬಳಸಿಕೊಂಡ ಕಲಾವಿದರಿಗೆ ₹20 ಲಕ್ಷ ಸಂಭಾವನೆ ವೆಚ್ಚವಾಗಿತ್ತು. ಮೂರು ಕೋಟಿ ವೆಚ್ಚ ಎಂದಾಗ ಜನರೂ ನಮ್ಮ ಬುದ್ಧಿ ನೆಟ್ಟಗಿದೆಯೇ ಎಂದು ಮಾತನಾಡಿಕೊಳ್ಳತೊಡಗಿದ್ದರು' ಎಂದು ಮೆಲುಕು ಹಾಕಿದ್ದಾರೆ ರಮೇಶ್. ಅಂತಿಮವಾಗಿ ಸಿನಿಮಾ ₹15 ಕೋಟಿ ಗಳಿಕೆ ಕಂಡು ಟೀಕಾಕಾರರ ಬಾಯಿ ಮುಚ್ಚಿಸಿತು.

ರಮೇಶ್ ಸಿಪ್ಪಿ ಅವರ ಮಾತುಗಳು ಇಂದು ಹಣ ಖರ್ಚು ಮಾಡಲೆಂದೇ ಸಿನಿಮಾ ಮಾಡುವ ಬಾಲಿವುಡ್ ಮಂದಿಯ ಬದ್ಧತೆಯನ್ನು ಪ್ರಶ್ನಿಸುವಂತಿವೆ.

■ ಅಮಿ